| ಸಂಖ್ಯೆ | ಮಕ್ಕಳ ಹಕ್ಕುಗಳು | ಪ್ರಮುಖವಲ್ಲ<br>Not important | ಪ್ರಮುಖವಾದುದು<br>Fairly Important | ಅತ್ಯಂತ ಪ್ರಮುಖವಾದುದು<br>Very important. |
|---|---|---|---|---|
| 12 | ಮಕ್ಕಳಿಗೆ ಅವರವರ ವಯಸ್ಸಿಗೆ ಅನುಗುಣವಾಗಿ ಆಡಲು, ಸಾಂಸ್ಕೃತಿಕ ಚಟುವಟಿಕಗಳಲ್ಲಿ ಭಾಗವಹಿಸಲು, ವಿಶ್ರಾಂತಿ ಪಡೆಯಲು ವ್ಯವಸ್ಥೆಗಳಾದ ಆಟದ ಮೈದಾನ, ಸಭಾ ಭವನ, ಗ್ರಂಥಾಲಯಗಳ ವ್ಯವಸ್ಥೆ ಬೇಕೇಬೇಕು.<br>Rest and leisure, play and recreation, and participation in cultural activities, according to my age. | | | |
| 13 | ಮಕ್ಕಳ ಮೇಲೆ ಆಗುವ ಆರ್ಥಿಕ, ದೈಹಿಕ, ಲೈಂಗಿಕ ಶೋಷಣೆಯನ್ನು ಸಂಪೂರ್ಣವಾಗಿ ನಿಲ್ಲಿಸಿ ಮಕ್ಕಳಿಗೆ ರಕ್ಷಣೆ ನೀಡಬೇಕು.<br>Protection from any form of exploitation – economic, sexual or use for any illegal purpose . | | | |
| 14 | ಮಕ್ಕಳನ್ನು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಸುವುದು, ಮಾದಕ ವಸ್ತುಗಳ ತಯ್ಯಾರಿ, ಸಾಗಣೆ ಮತ್ತು ಬಳಕೆಗಳಲ್ಲಿ ತೊಡಗಿಸದಂತೆ ರಕ್ಷಣೆ ನೀಡಬೇಕು.<br>Protection from illegal use of narcotic drugs and from being used in its production or trade. | | | |
| 15 | ಮಕ್ಕಳನ್ನು ಯಾರೂ ಸಹ, ಯಾವುದೇ ಕಾರಣಕ್ಕೆ ಬಂಧಿಸುವುದು, ಕದ್ದೊಯ್ಯುವುದು, ಮಾರುವುದರ ವಿರುದ್ಧ ರಕ್ಷಿಸಲೇಬೇಕು.<br>Protection from abduction, and being sold or trafficked for any purpose or in any form. | | | |
| 16 | ಮಕ್ಕಳು ಮಾಡಿರುವ ತಪ್ಪುಗಳು/ಕಾನೂನಿನೊಡನೆ ಸಂಘರ್ಷ ಆದಾಗ ಮಕ್ಕಳನ್ನು ಬಂಧಿಸಿಡುವುದು, ಶಿಕ್ಷೆ ನೀಡುವುದನ್ನು ಮಾಡಲೇಬಾರದು.<br>Protection from illegal treatment and detention in case of any conflict with the law. | | | |
| 17 | ಮಕ್ಕಳನ್ನು ಎಲ್ಲ ರೀತಿಯ ದೈಹಿಕ, ಮಾನಸಿಕ ಹಿಂಸೆ, ದುರುಪಯೋಗಗಳಾಗ ದಂತೆ ರಕ್ಷಿಸಬೇಕು.<br>Protection from all forms of physical or mental violence, abuse, torture, etc. | | | |
| 18 | ಸಮುದಾಯಗಳಲ್ಲಿ ಸಶಸ್ತ್ರ ಸಂಘರ್ಷಗಳಾದಲ್ಲಿ ಅಥವಾ ನಿರಾಶ್ರಿತರಾಗಿ ಬಂದಾಗ ಮಕ್ಕಳಿಗೆ ಸೂಕ್ತವಾದ ರಕ್ಷಣೆಯನ್ನು ನೀಡಲೇಬೇಕು.<br>In case of armed conflict, protection; and assistance also if a refugee. | | | |

**ಸಹಿ ಸಂಗ್ರಹ**

ಕೃಷಿ ಸಂಬಂಧಿತ ಕ್ಷೇತ್ರಗಳಲ್ಲಿ ದುಡಿಯುವ ಮಕ್ಕಳನ್ನು ಬಾಲಕಾರ್ಮಿಕರೆಂದು ಪರಿಗಣಿಸಿ

12 ವರ್ಷಗಳ ಕಡ್ಡಾಯ ಮತ್ತು ಉಚಿತ ಶಿಕ್ಷಣ ನೀಡಿ

ಬಾಲಕಾರ್ಮಿಕರೆನ್ನುವ ವಯೋಮಿತಿಯನ್ನು 18 ವರ್ಷಕ್ಕೆ ಏರಿಸಿ.

**Signature Campaign**

Consider agriculture sector also under child labour prohibition.

Provide 12 years of free and compulsory education

Raise the child labour age limit to 18 years.

ನಿಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಮಕ್ಕಳನ್ನು ಕುರಿತು ರಾಜಕೀಯ ಪಕ್ಷಗಳ ಗಮನ ಸೆಳೆಯಬೇಕಾದ ಇತರ ವಿಚಾರಗಳು.

Any other issues concerning to children of your constituency that you wish to draw the attention of political parties. ______________________________

______________________________

______________________________

ಸಹಿ/Signature..............................

# ಭಾರತದ ಪ್ರಜೆಗಳಾದ ಮಕ್ಕಳೇ, ಶಾಸಕರಾಗಿ ಚುನಾಯಿತರಾಗುವವರು ಮಕ್ಕಳ ಬೇಡಿಕೆಗಳನ್ನು ವಿಧಾನ ಸೌಧದಲ್ಲಿ ಪ್ರತಿನಿಧಿಸುತ್ತಾರೇನು?




## Children, being citizens of India, do you think elected representatives voice your issues in the Vidhana Soudha ?

ಹೌದು Yes ☐    ಇಲ್ಲ No ☐    ಗೊತ್ತಿಲ್ಲ I don't know ☐

**ಮಕ್ಕಳೇ ಬನ್ನಿ ಕರ್ನಾಟಕ ವಿಧಾನ ಸಭೆ ಚುನಾವಣೆ ಸಮಯದಲ್ಲಿ ಮಕ್ಕಳ ಆವಶ್ಯಕತೆಗಳನ್ನು ಹೇಳ ಬನ್ನಿ.**

Come children, join us to voice the demands of children during election to the Karnataka Legislative Assembly.

ಬಾಲಕಾರ್ಮಿಕ ಪದ್ಧತಿ ವಿರೋಧೀ ಆಂದೋಲನ

CACL-K

C/O ಅಭಿವೃದ್ಧಿ, ಮಹಾಲಕ್ಷ್ಮಿ ನಗರ, ಗುಬ್ಬಿ, ತುಮಕೂರು ಜಿಲ್ಲೆ–560 016

ದೂ. 08131222292

# ಬಾಲ ಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ – ಕರ್ನಾಟಕ

ರಾಜ್ಯ ಸಂಯೋಜನಾ ಕಾರ್ಯಾಲಯ, c/o ಅಭಿವೃದ್ಧಿ, 3ನೇ ಅಡ್ಡ ರಸ್ತೆ, ಮಹಾಲಕ್ಷ್ಮಿ ನಗರ,
ಗುಬ್ಬಿ, ತುಮಕೂರು ಜಿಲ್ಲೆ 572216 ದೂ. 08131 222292 ಇಮೇಲ್ : abhigubbi1@yahoo.com

**ಪ್ರಿಯ ಮಕ್ಕಳೆ,**

ಎಲ್ಲರಿಗೂ ಹಕ್ಕುಗಳಿವೆ. ಮಕ್ಕಳಿಗೆ ವಿಶೇಷವಾದ ಹಕ್ಕುಗಳಿವೆ. ತಮ್ಮ ಹಕ್ಕುಗಳಲ್ಲಿ ಕೆಲವು ಬಹಳ ಮುಖ್ಯವಾದುವು ಮತ್ತು ಅವುಗಳನ್ನು ತುರ್ತಾಗಿ ಜಾರಿಗೆ ತರಬೇಕು ಎಂದು ತಮ್ಮ ಪರಿಸರ, ತಿಳಿವಳಿಕೆ, ಬದುಕಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕೆಲವು ಮಕ್ಕಳು ಭಾವಿಸಬಹುದು.

ನಮ್ಮ ರಾಜ್ಯದಲ್ಲಿ ಈಗ ಚುನಾವಣೆಗಳು ನಡೆಯಲಿದೆ. ನಮ್ಮ ಹಕ್ಕುಗಳನ್ನು, ಅದರಲ್ಲೂ ವಿಶೇಷವಾಗಿ ಮಕ್ಕಳ ಹಕ್ಕುಗಳನ್ನು ರಕ್ಷಿಸುವ ಜವಾಬ್ದಾರಿ ಹೊರಲಿರುವ ನಾಯಕರನ್ನು ನಾವು ಚುನಾಯಿಸಲಿದ್ದೇವೆ.

ಈ ಸಂದರ್ಭದಲ್ಲಿ ಮಕ್ಕಳ ಯಾವ ಯಾವ ಪ್ರಮುಖವಾದ ಹಕ್ಕುಗಳನ್ನು ನಮ್ಮ ನಾಯಕರು ಜಾರಿ ಮಾಡಲೇಬೇಕು ಎಂದು ತಿಳಿಸಿದರೆ, ಅದನ್ನು ನಾವು ರಾಜಕೀಯ ಪಕ್ಷಗಳು, ನಾಯಕರ ಗಮನಕ್ಕೆ ತರುತ್ತೇವೆ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆದಿರುವ ಮಕ್ಕಳ ಹಕ್ಕುಗಳ ಒಡಂಬಡಿಕೆಯ ಕೆಲವು ಪ್ರಮುಖ ವಿಚಾರಗಳು ಈ ಮುಂದಿನ ಪಟ್ಟಿಯಲ್ಲಿ ನೀಡಲಾಗಿದೆ. ಇವುಗಳಿಗೆ ಭಾರತ ದೇಶದ ಸಹಮತಿ ಇದೆ. ಪಟ್ಟಿಯಲ್ಲಿರುವ ಮಕ್ಕಳ ಹಕ್ಕುಗಳ ವಿಚಾರದ ಬಗ್ಗೆ ನಿಮಗೆ ತೋರುವಂತೆ ಅದು ಪ್ರಮುಖವಲ್ಲ, ಪ್ರಮುಖವಾದುದು ಅಥವಾ ಬಹಳ ಪ್ರಮುಖವಾದುದು ಎಂದು ನೀವು ಗುರುತಿಸಬಹುದು.

**Dear Children,**

As you may know, all people have rights and children have special rights. But each child might feel that some rights are more urgent and important than others, depending on his/her situation and outlook.

Our state will be going through elections to elect our leaders who are supposed to ensure that all of us, especially children will get their rights.

So if you children can give voice to your important rights, we can pass your opinion to the leaders and try to make them give attention to them.

The table in the adjacent page lists Rights that the International Convention on the Rights of Children [CRC] has agreed upon and that our country has agreed to give its children.

What you need to do is to tick against each statement [which corresponds to one right] in the column that you feel best describes how you feel not important, fairly important or very important.

## ಕೇಳಿರಿ ಕೇಳಿರಿ ಜನ ನಾಯಕರೆ.

ಕೇಳಿರಿ ಕೇಳಿರಿ ಜನ ನಾಯಕರೆ
ಆಲಿಸಿ ದೇಶದ ಮಕ್ಕಳ ಸ್ಥಿತಿಯ
ಮತ ಕೊಡಲಾರದ ಮಾತನಾಡದ
ಹಸುಗುಸುಗಳ ಇಂದಿನ ಕತೆಯ\\

ಊರಲಿ ಕೇರಿಲಿ ಹಳ್ಳಿ ದಿಳ್ಳಿಯಲಿ
ಇರುವರು ಎಷ್ಟು ಮಕ್ಕಳು ಗೊತ್ತೆ ?
ಹುಟ್ಟಿದವರಲಿ ಉಳಿದವರೆಷ್ಟು
ಲೆಕ್ಕಗೆ ಬಾರದೆ ಅಳಿದವರೆಷ್ಟು
ಎಂಬಾ ವಿವರವ ತಿಳಿದಿದೆಯೇನು ?
ಅವರ ಬವಣೆಯ ಅರಿವಿದೆ ಏನು ?\\

ಹೆಣ್ಣುಮಕ್ಕಳ ಸಂಖ್ಯೆಯು ಇಳಿದಿದೆ
ಭವಿಷ್ಯದ ಭದ್ರತೆ ಅಡಿ ಅಲುಗಾಡಿದೆ.
ಭ್ರೂಣದ ಕೊಲೆಯು ಶಿಶುಗಳ ಹತ್ಯೆ
ದಿನವಹಿ ಕೆಲಸದ ಭಾಗವೇ ಆಗಿದೆ.
ನಿಲ್ಲಿಸಿ ಇದನು ಪ್ರಾಣವ ಉಳಿಸಿ
ಮಕ್ಕಳ ನಾಳೆಗೆ ಭರವಸೆ ನೀಡಿರಿ \\

ಶಾಲೆಗೆ ಬಾರದೆ ಚಿಣ್ಣರು ಬಾಲರು
ದುಡಿಮೆಯ ಗೂಟಕೆ ಕಟ್ಟು ಬಿದ್ದಿಹರು.
ಬಿಡಿಸಿರಿ ಅವರನು ಬದುಕನು ನೀಡಿರಿ
ಯುವಕರ ಕೆಲಸಕೆ ಮನ್ನಣೆ ನೀಡಿರಿ.
ಆಗಲೆ ಸಿಗುವುದು ನಿಮಗೆ ಗೌರವ
ಮತ ನೀಡುವವರ ಸಂತಸ ಬೆಂಬಲ\\

ಮಕ್ಕಳು ಮರಿಗಳ ಶೋಷಣೆಗೆಂದೇ
ಕದಿಯುತ ಸಾಗಿಸಿ ಮಾರುತಲಿಹರು.
ಮಕ್ಕಳು ಮಾರುವ ಸರಕಾಗಿಸುತ
ಲಾಭದ ಆಸೆಗೆ ತಕ್ಕಡಿ ಹಿಡಿವರು.
ಮಕ್ಕಳ ರಕ್ಷಣೆ ನಿಮ್ಮಯ ಆದ್ಯತೆ
ಆಗಲಿ ಇಂದಿನ ಚುನಾವಣೆಯಲಿ \\

ಮನೆ ಮಠವಿಲ್ಲದೆ ಮಕ್ಕಳು ಅಲೆವರು
ಆಸರೆ ನೀಡುವ ಜನರೆಲ್ಲಿಹರು ?
ಬದುಕೆ ಇಲ್ಲದೆ ರಕ್ಷಣೆ ಕಾಣದ
ಬಾಲರ ಕನಸಲಿ ಬಣ್ಣವು ಮೂಡದು.
ನೀಡಿರಿ ಅವರಿಗೆ ಬದುಕಿನ ಭರವಸೆ
ಕಲಿಸುವ ನಲಿಸುವ ನಾಯಕರಾಗಿ \\

ರೋಗ ನಿರೋಧಕಗಳು ಎಲ್ಲೆಡೆ ಸಿಗದೆ
ಹಳ್ಳಿಗಾಡಿನ ಮಕ್ಕಳು ಸೊರಗಿ
ಅಂಗವಿಕಲತೆಗೆ ಬಲಿಯಾಗುತಲಿ
ಮುರುಟಿ ಹೋಗುವರು ಜೀವದ ಕುಡಿಗಳು.
ತಿಳಿಯಿರಿ ಇದನು ಜನ ನಾಯಕರೆ
ರೋಗ ತಡೆಯಲು ಫಣವನು ತೊಡಿರಿ \\

ಮದುವೆಯ ನೆಪದಲಿ ಹಸುಗೂಸುಗಳನೇ
ತಾಳಿಯ ಉರುಳಿಗೆ ಬಿಗಿಯುತಲಿಹರು.
ಅಪರಾಧವಿದು ಎಂದು ತಿಳಿದರೂ
ಹಿರಿಯರು ನಿಂತು ಬೆಂಬಲಿಸುವರು.

ನಿಲ್ಲಿಸಿ ಇದನು ಜನ ಪ್ರತಿನಿಧಿಗಳೆ
ಹೆಣ್ಣುಮಕ್ಕಳ ಜೀವವುಳಿಸಿರಿ \\

ಶಾಲೆಗಳಿದ್ದರೂ ಶಿಕ್ಷಕರಿಲ್ಲದೆ
ಕೋಣೆಗಳಿಲ್ಲದೆ ಪಾಟಗಳಿಲ್ಲದೆ
ಮಕ್ಕಳದೇನು ಕಲಿವರು ನಲಿವರು
ಕತ್ತಲೆಯಲ್ಲೆ ಜೀವನ ಕಳೆವರು.
ಅರಿಯಿರಿ ಇದನು ಜನ ನಾಯಕರೆ
ಶಿಕ್ಷಣ ಹಕ್ಕನು ಜಾರಿ ಮಾಡಿರಿ \\

ಚುನಾವಣೆಯಲಿ ಪ್ರಣಾಳಿಕೆಯಲಿ
ಮಕ್ಕಳ ಬದುಕನು ಬಿಂಬಿಸಿರಿ
ಆರೋಗ್ಯ ಶಿಕ್ಷಣ ರಕ್ಷಣೆಯೊಂದಿಗೆ
ಮಕ್ಕಳ ಮಾತನು ಆಲಿಸಿರಿ.
ಮಕ್ಕಳ ಹಿತವೇ ರಾಷ್ಟ್ರದ ಏಳ್ಗೆಯು
ಎಂಬಾ ತತ್ವವ ಮರೆಯದಿರಿ \\

ಮಕ್ಕಳು ದೇಶದ ಪ್ರಜೆಗಳು ಎಂಬುದ
ಮರೆಯಲು ಬೇಡ ನಾಯಕರೆ.
ಪ್ರಜೆಗಳಿಗಿತ್ತ ಭರವಸೆಗಳನು
ಹುಸಿಯಾಗಿಸದಿರಿ ಬಂಧುಗಳೆ.
ನಿಮ್ಮಯ ಕ್ಷೇತ್ರದ ಮಕ್ಕಳ ಸ್ಥಿತಿಯ
ಪ್ರಶ್ನೆಯ ಕೇಳಿರಿ ಶಾಸನ ಸಭೆಯಲಿ \\

– **ವಾಸುದೇವ ಶರ್ಮಾ**

Cut here ------ ಇಲ್ಲಿ ಕತ್ತರಿಸಿ

ಹೆಸರು/Name : ____________________. ವಯಸ್ಸು/Age____ ಲಿಂಗ/Gende ________

ಮಗುವಿನ ಹಿನ್ನೆಲೆ (ಶಾಲೆಗೆ ಹೋಗುತ್ತಿರುವ, ಶಾಲೆಗೆ ಹೋಗದ, ಇತ್ಯಾದಿ)

Background of the child (school going, not going,etc)____________________

ವಿಧಾನ ಸಭಾ ಕ್ಷೇತ್ರ/Assembly Constituency____________________ಜಿಲ್ಲೆ/District __________

| ಸಂಖ್ಯೆ | ಮಕ್ಕಳ ಹಕ್ಕುಗಳು | ಪ್ರಮುಖವಲ್ಲ Not important | ಪ್ರಮುಖವಾದುದು Fairly Important | ಅತ್ಯಂತ ಪ್ರಮುಖವಾದುದು Very important. |
|---|---|---|---|---|
| 1. | ಯಾವುದೆ ಕಾರಣಕ್ಕೂ ಯಾವುದೆ ಮಗುವನ್ನು ತಾರತಮ್ಯಕ್ಕೆ ಗುರಿಯಾಗಿಸಬಾರದು.<br>No child should be discriminated against for any reason. | | | |
| 2. | ಮಕ್ಕಳ ಜೀವಿಸುವ ಹಕ್ಕನ್ನು ಎಲ್ಲ ರೀತಿಯಲ್ಲೂ ರಕ್ಷಿಸಬೇಕು.<br>Life, meaning survival and development should be protected. | | | |
| 3. | ಮಕ್ಕಳ ವೈಯಕ್ತಿಕ ಗುರುತುಗಳನ್ನು ಖಾತರಿ ಪಡಿಸುವ ಜನ್ಮ ದಾಖಲೆ, ಕುಟುಂಬ, ರಾಷ್ಟ್ರೀಯತೆಯನ್ನು ರಕ್ಷಿಸಬೇಕು.<br>A name and nationality [an identity] should be protected. | | | |
| 4. | ಮಕ್ಕಳಿಗೆ ಪ್ರೀತಿಯಿಂದ ಪಾಲಿಸುವ ಪೋಷಕರು ಇರಬೇಕು. ಇದಾಗದಿದ್ದಲ್ಲಿ ಮಕ್ಕಳಿಗೆ ಪರ್ಯಾಯ ಸೂಕ್ತ ವ್ಯವಸ್ಥೆಯನ್ನು ಮಾಡಿಕೊಡಲೇಬೇಕು.<br>The love and care by parents or, in case this is not possible, by a suitable alternative family to every child. | | | |
| 5. | ಮಕ್ಕಳಿಗೆ ಮಾಹಿತಿ ಪಡೆಯುವ ಮತ್ತು ತಮಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಅಭಿಪ್ರಾಯವನ್ನು ನೀಡುವ ಸ್ವಾತಂತ್ರ್ಯಕ್ಕೆ ಮನ್ನಣೆ ಇರಬೇಕು.<br>Freedom of opinion and expression, and to information and meeting with others. | | | |
| 6. | ಮಕ್ಕಳ ಧಾರ್ಮಿಕ ಮತ್ತು ಸಾಂಸ್ಕೃತಿಕ ಸ್ವಾತಂತ್ರ್ಯವನ್ನು ರಕ್ಷಿಸಬೇಕು.<br>Freedom of religion and culture. | | | |
| 7. | ಮಕ್ಕಳ ಖಾಸಗೀತನ, ಕೌಟುಂಬಿಕ ಗೌರವ ಇತ್ಯಾದಿಗಳನ್ನು ಯಾರೂ ಹಾನಿ ಮಾಡಬಾರದು.<br>No interference to my privacy, home and reputation. | | | |
| 8. | ಮಕ್ಕಳಿಗಾವುದಾದರೂ ವಿಕಲಾಂಗತೆ ಇದ್ದಲ್ಲಿ ಅವರಿಗೆ ಅರ್ಥಪೂರ್ಣವಾದ ಜೀವನ ನಡೆಸಲು ಸಂಪೂರ್ಣವಾದ ಸೌಲಭ್ಯಗಳು ಸಿಗಲೇಬೇಕು.<br>In case of disability of any kind, be able to have a full and decent life, as self-reliant as possible. | | | |
| 9. | ಮಕ್ಕಳ ಸಂಪೂರ್ಣ ಅಭಿವೃದ್ಧಿ ಮತ್ತು ಸಾಮಾಜಿಕ ರಕ್ಷಣೆಗಾಗಿ ಸೂಕ್ತವಾದ ಜೀವನ ಮಟ್ಟವನ್ನು ಖಾತರಿಪಡಿಸಬೇಕು.<br>A standard of living that is needed for full development and to social security of every child. | | | |
| 10. | ಮಕ್ಕಳಿಗಾಗಿ ಉನ್ನತ ದರ್ಜೆಯ ಆರೋಗ್ಯ ವ್ಯವಸ್ಥೆ, ಅನಾರೋಗ್ಯದ ಸಮಯದಲ್ಲಿ ಚಿಕಿತ್ಸೆ ಮತ್ತು ಸೌಲಭ್ಯಗಳು ಇರಬೇಕು.<br>Enjoy the highest standard of health, with facility to the treatment of illness. | | | |
| 11. | ಎಲ್ಲ ಮಕ್ಕಳಿಗಾಗಿ ಉಚಿತವೂ ಮತ್ತು ಗುಣಮಟ್ಟವುಳ್ಳ ಪ್ರಾಥಮಿಕ ಶಿಕ್ಷಣ ಖಾತರಿಯಾಗಿ, ಮಕ್ಕಳ ಯಾವುದೇ ಗೌರವಗಳಿಗೆ ತೊಂದರೆಯಾಗದಂತಹ ಮತ್ತು ಶಿಕ್ಷೆ ರಹಿತ ವಾತಾವರಣದಲ್ಲಿ ಕಲಿತು ಉನ್ನತವಾದ ಶೈಕ್ಷಣಿಕ ಮಟ್ಟವನ್ನು ಸಾಧಿಸಲು ನೆರವು ಇರಲೇಬೇಕು.<br>Free elementary education and accesss to higher levels, that helps to develop all my abilities and that is imparted without corporal punishment or degrading me in any way. | | | |